ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಲೋಕೋಪಯೋಗಿ ಇಲಾಖೆ, ನಂ.1ನೇ ಉಪ-ವಿಭಾಗ,
ವಿನೋಬ ರಸ್ತೆ, ಮೈಸೂರು.

ಕರ್ನಾಟಕ ಸರ್ಕಾರ
(ಲೋಕೋಪಯೋಗಿ ಇಲಾಖೆ)

Office of the Assistant Executive Engineer,
Public Work Department,
No.1 Sub Division, Mysore.
Mail:aeepwdmysore@gmail.com

ಸಂಖ್ಯೆ:ಸಕಾಇಂ:ಲೋ.ಇ:ನಂ.1ಉವಿ:ಮೈ:ಎಇ:ಕಟ್ಟಡ ಸುರಕ್ಷತೆ:2025-26

451
28/08/2025

ಇವರಿಗೆ,

Secretary
ST PIOUS X SCHOOL
HALE KESARE, KASABA HOBLI
MYSURU TALUK
MYSURU DIST.

ಮಾನ್ಯರೇ,

**ವಿಷಯ:**- ಮೈಸೂರು ನಗರದ ಸೆಂಟ್ ಪಿಯುಶ್ ಎಕ್ಸ್ ಶಾಲೆ, ಹಳೆ ಕೆಸರೆ , ಆರ್.ಬಿ.ಐ ಅಂಚೆ, ಮೈಸೂರು ಇವರ ಶಾಲಾ ಕಟ್ಟಡದ ಸುರಕ್ಷತಾ ಪ್ರಮಾಣ ಪತ್ರವನ್ನು ನವೀಕರಿಸಿಕೊಡುವ ಬಗ್ಗೆ.

**ಉಲ್ಲೇಖ:** 1) ಕಾರ್ಯಪಾಲಕ ಇಂಜಿನಿಯರ್,ಲೋ.ಇ.ಮೈಸೂರು ವಿಭಾಗ, ಮೈಸೂರುರವರ ಕಚೇರಿ ಪತ್ರ ಸಂಖ್ಯೆ: 977-78/ದಿ: 05.06.2024.
2) ತಮ್ಮ ಮನವಿ ಪತ್ರ ದಿ: 23.06.2025.
3) ಈ ಕಚೇರಿ ಪತ್ರ ಸಂಖ್ಯೆ: 239, ದಿ: 30.05.2025.
4) ಸರ್ಕಾರಿ ಸುತ್ತೋಲೆ ಸಂಖ್ಯೆ: ಲೋ.ಇ:59:ಬಿಇಡಿ:2019: ದಿ: 06.05.2022.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮೈಸೂರು ನಗರದ ಸೆಂಟ್ ಪಿಯುಶ್ ಎಕ್ಸ್ ಶಾಲೆ, ಹಳೆ ಕೆಸರೆ , ಆರ್.ಬಿ.ಐ ಅಂಚೆ, ಮೈಸೂರು ಇವರು 2024-25 ನೇ ಸಾಲಿನಲ್ಲಿ ಪಡೆಯಲಾಗಿದ್ದ ಶಾಲಾ ಕಟ್ಟಡದ ಸುರಕ್ಷತಾ ಪ್ರಮಾಣ ಪತ್ರವನ್ನು 2025-26 ನೇ ಸಾಲಿಗೆ ನವೀಕರಿಸಿಕೊಡುವಂತೆ ಉಲ್ಲೇಖ ಪತ್ರ (2) ರಲ್ಲಿ ಕೋರಿರುತ್ತೀರಿ.

ಕಳೆದ 2024-25 ನೇ ಸಾಲಿನಲ್ಲಿ ದಿನಾಂಕ: 28.05.2024 ರಂದು ಭೌತಿಕವಾಗಿ ಪರಿಶೀಲಿಸಲಾಗಿ ಕಟ್ಟಡವು ನೆಲ ಅಂತಸ್ತು, ಮೊದಲನೇ ಅಂತಸ್ತು ಮತ್ತು ಎರಡನೇ ಅಂತಸ್ತಿನ ಕಟ್ಟಡವಾಗಿದ್ದು, ನೆಲ ಮತ್ತು ಮೊದಲನೇ ಮಹಡಿಯು ಪೂರ್ಣವಾಗಿದ್ದು, ಬಣ್ಣ ಬಳಿಯುವ ಕಾಮಗಾರಿಯು ಪ್ರಗತಿಯಲ್ಲಿತ್ತು. ಎರಡನೇ ಮಹಡಿಯ ನೆಲಹಾಸು ಕಾಮಗಾರಿಯು ಪ್ರಗತಿಯಲ್ಲಿತ್ತು. ಕುಡಿಯುವ ನೀರಿನ ವ್ಯವಸ್ಥೆ, ಶೌಚಾಲಯ ವ್ಯವಸ್ಥೆ ಮಾಡಲಾಗಿರುತ್ತದೆ. ಕಟ್ಟಡದ ಆಂತರಿಕ ಸುರಕ್ಷತೆಯ ಸಂಬಂಧ ಕಟ್ಟಡದ ಕಾಂಕ್ರೀಟ್ ಸಧೃಢತೆಯ ಬಗ್ಗೆ Build point , Construction & technologies, ಗಂಗೋತ್ರಿ ಲೇಔಟ್,ಮೈಸೂರುರವರು ಕಟ್ಟಡದ ಪರೀಕ್ಷೆಗಳನ್ನು ನಡೆಸಿ Physical observation Accordingly necessary field Test ಪರೀಕ್ಷೆಗಳನ್ನು ಕೈಗೊಂಡಿದ್ದು, Recongizance visual inspection of Building-cracks, distress, dampness etc. Form for certificaster for structural Design sufficiency ಕಟ್ಟಡವು ರಚನಾತ್ಮಕವಾಗಿ ಸುರಕ್ಷಿತವಾಗಿದೆ ಎಂದು ವರದಿಸಲಾಗಿತ್ತು.

ಮುಂದುವರೆದು ಕಟ್ಟಡದ ದೃಢತೆಯ ಬಗ್ಗೆ ದಿ: 03.08.2025 ರಂದು ಕಟ್ಟಡ ಪರಿಶೀಲಿಸಲಾಗಿ ದಿನಾಂಕ: 17.09.2024 ರಂದು ಕಟ್ಟಡವು ನಿರ್ಮಾಣವು ಪೂರ್ಣಗೊಂಡಿರುತ್ತದೆ. ಶಾಲೆಗೆ ಮೂಲ ಸೌಲಭ್ಯಗಳಾದ ಕುಡಿಯುವ ನೀರಿನ ವ್ಯವಸ್ಥೆ, ಶೌಚಾಲಯ ವ್ಯವಸ್ಥೆ ಮಾಡಲಾಗಿರುತ್ತದೆ. ಸುರಕ್ಷಿತ ಮೆಟ್ಟಿಲುಗಳು, ಅಂಗವಿಕಲರಿಗಾಗಿ ರ್‍ಯಾಂಪ್ ವ್ಯವಸ್ಥೆ , ಕಾಲಂಗಳಲ್ಲಿ, ಬೀಮ್‌ಗಳಲ್ಲಿ ಮತ್ತು ಗೋಡೆಗಳಲ್ಲಿ ಎಲ್ಲೂ ಬಿರುಕು ಉಂಟಾಗಿರುವುದು ಕಂಡುಬಂದಿರುವುದಿಲ್ಲ, 2ನೇ ಅಂತಸ್ತಿನ ಛಾವಣಿಯ ಮೇಲೆ ಗಿಡಗಳು ಬೆಳೆದಿರುವುದಿಲ್ಲ. ಮಳೆಗಾಲದಲ್ಲಿ ಛಾವಣಿಯ ಮೇಲೆ ಬಿದ್ದ ನೀರು ಸರಾಗವಾಗಿ ಪೈಪುಗಳ ಮುಖಾಂತರ ಕೆಳಕ್ಕೆ ಹರಿದು ಹೋಗುವ ವ್ಯವಸ್ಥೆ ಮಾಡಿರುವುದು ಕಂಡುಬಂದಿರುತ್ತದೆ . ಸದರಿ ಕಟ್ಟಡದ

ಕಾಂಕ್ರೀಟ್ ದೃಢತೆಯ ಬಗ್ಗೆ 2024-25 ನೇ ಸಾಲಿನಲ್ಲಿ Build point , Construction & technologies, ಗಂಗೋತ್ರಿ ಲೇಔಟ್,ಮೈಸೂರುರವರು ನಡೆಸಿರುವ ISO/IES NBC 2016 Group B Subdivision B1 & B2 ) Education Building ರನ್ವಯ ಎನ್.ಡಿ.ಟಿ ಟೆಸ್ಟ್ & ಸ್ಟ್ರಕ್ಚರಲ್ ಸ್ಟೆಬಿಲಿಟಿ ವರದಿಯನ್ನು ಆಧರಿಸಿ ಸದರಿ ಕಟ್ಟಡವು ರಚನಾತ್ಮಕವಾಗಿ ಸುರಕ್ಷಿತವಾಗಿದೆ ಮತ್ತು ಪ್ರಸಕ್ತ ಶೈಕ್ಷಣಿಕ ಸಾಲಿಗೆ ಕಟ್ಟಡ ಸುರಕ್ಷತಾ ಪ್ರಮಾಣ ಪತ್ರವನ್ನು ನವೀಕರಿಸಿ ದಿ: 28.08.2025 ರಿಂದ 27.08.2035 ರವರೆಗೆ ಕಟ್ಟಡ ಸುರಕ್ಷತಾ ಪ್ರಮಾಣ ಪತ್ರವನ್ನು 10 ವರ್ಷಗಳ ಅವಧಿಗೆ ಕಟ್ಟಡ ಸುರಕ್ಷತಾ ಪ್ರಮಾಣ ಪತ್ರವನ್ನು ಈ ಕೆಳಕಂಡ ಷರತ್ತುಗಳೊಂದಿಗೆ ನೀಡಲಾಗಿದೆ.

**ಷರತ್ತುಗಳು :-**

**ಶಾಲೆಯ ಆಡಳಿತ ಮಂಡಳಿಯವರಿಗೆ :**

1. ಕರ್ನಾಟಕ ಸರ್ಕಾರದ ಸುತ್ತೋಲೆ ದಿನಾಂಕ 25.09.2024ರಲ್ಲಿ ವಿವರಿಸಿರುವ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.
2. ಕರ್ನಾಟಕ ಸರ್ಕಾರದ ಸುತ್ತೋಲೆ ದಿನಾಂಕ 07.05.2022ರಲ್ಲಿ ವಿವರಿಸಿರುವ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.
3. ಸದರಿ ಶಾಲಾ ಕಟ್ಟಡಕ್ಕೆ ಅವಶ್ಯವಿರುವ ಕುಡಿಯುವ ನೀರಿನ ವ್ಯವಸ್ಥೆಯನ್ನು ಮುಂದಿನ 10 ವರ್ಷಗಳ ವರೆಗೆ ಸುಸ್ಥಿತಿಯಲ್ಲಿಡುವುದು.
4. ಸದರಿ ಶಾಲಾ ಕಟ್ಟಡಕ್ಕೆ ಗಂಡು ಮಕ್ಕಳು. ಹೆಣ್ಣು ಮಕ್ಕಳಿಗೆ ಹಾಗು ಅಂಗವಿಕಲರಿಗೆ ಪ್ರತ್ಯೇಕವಾಗಿ ಶೌಚಾಲಯ ವ್ಯವಸ್ಥೆಯನ್ನು ಮಾಡತಕ್ಕದ್ದು ಹಾಗೂ ಕಡ್ಡಾಯವಾಗಿ ಶುಚಿತ್ವವನ್ನು ಕಾಪಾಡಿಕೊಳ್ಳತಕ್ಕದ್ದು.
5. ಸದರಿ ಶಾಲಾ ಕಟ್ಟಡದಲ್ಲಿ ಅಂಗವಿಕಲರಿಗೆ ರ್‍ಯಾಂಪ್ ವ್ಯವಸ್ಥೆಯನ್ನು ಮುಂದಿನ 10 ವರ್ಷಗಳ ವರೆಗೆ ಸುಸ್ಥಿತಿಯಲ್ಲಿಡುವುದು.
6. ಸದರಿ ಶಾಲಾ ಕಟ್ಟಡವನ್ನು ಕಾಲಕಾಲಕ್ಕೆ ತಪಾಸಣೆ ನಡೆಸಿ ಅವಶ್ಯವಿರುವ ನಿರ್ವಹಣೆಯನ್ನು ಮಾಡತಕ್ಕದ್ದು.
7. ಸದರಿ ಶಾಲಾ ಕಟ್ಟಡವನ್ನು ಮಾರ್ಪಾಡು ಮಾಡಬೇಕಾದ ಸಂದರ್ಭದಲ್ಲಿ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರದಿಂದ ಅನುಮತಿ ಮತ್ತು ಅನುಮೋದನೆಯನ್ನು ಕಡ್ಡಾಯವಾಗಿ ಪಡೆಯತಕ್ಕದ್ದು.

ಒಂದು ವೇಳೆ ಸದರಿ ಶಾಲಾ ಕಟ್ಟಡವನ್ನು ಈ ಕಛೇರಿಯಿಂದ ಅನಿರೀಕ್ಷಿತ ತಪಾಸಣೆ ಮಾಡುವ ಸಮಯದಲ್ಲಿ ನ್ಯೂನತೆಗಳು ಕಂಡುಬಂದು, ಶಾಲಾ ಕಟ್ಟಡವನ್ನು ಸೂಕ್ತ ನಿರ್ವಹಣೆ ಮಾಡುವಲ್ಲಿ ವಿಫಲವಾಗಿದ್ದು, ಕಂಡುಬಂದಲ್ಲಿ ತಕ್ಷಣದಿಂದಲೇ ಜಾರಿಗೆ ಬರುವಂತೆ ಶಾಲಾ ಕಟ್ಟಡದ ಸುರಕ್ಷತಾ ಪ್ರಮಾಣ ಪತ್ರವನ್ನು **ರದ್ದುಗೊಳಿಸಲಾಗುವುದು.**

ತಮ್ಮ ವಿಶ್ವಾಸಿ,

ಸಹಾಯಕ ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ,
ನಂ.1 ನೇ ಉಪ-ವಿಭಾಗ, ವಿನೋಬ ರಸ್ತೆ, ಮೈಸೂರು.

Format for Application to be submitted by the Educational Organizations

| | | |
|---|---|---|
| 1 | Name and address of the building | ST PIOUS X SCHOOL |
| 2 | Number of stories approved in the sanction building Plan | G+2 |
| 3 | Year of construction | 2024 |
| 4 | **Submission of Following documents are not mandatory for the building already constructed and working. But mandatory for new buildings** | |
| a | Approved building plan from the competent authority | Enclosed/Not enclosed |
| b | Completion certificate duly signed by the Supervision Engineer who is in charge of the building | Enclosed/Not enclosed |

Date 28-08-2025

Place : Mysore

ST. PIOUS X SCHOOL
OLD KESARE, K.R. MILL ROAD
RBI POST, MYSURU TALUK
MYSURU-570003

(seal and signature of the Organization)

**Remarks of the inspecting Authority**

ಸದರಿ ಕಟ್ಟಡವನ್ನು ದಿನಾಂಕ: 03.08.2025 ರಂದು ಪರಿಶೀಲಿಸಲಾಗಿದ್ದು, ಕಟ್ಟಡವು ನೆಲಮಹಡಿ+2 ಅಂತಸ್ತು ಕಟ್ಟಡವಾಗಿದ್ದು, ಪ್ರಸ್ತುತ ಕಟ್ಟಡವನ್ನು **2024** ರಲ್ಲಿ ನಿರ್ಮಾಣ ಮಾಡಲಾಗಿರುತ್ತದೆ. ಕಟ್ಟಡವು ಸುರಕ್ಷಿತವಾಗಿದ್ದು, ಕುಡಿಯುವ ನೀರಿನ ವ್ಯವಸ್ಥೆ/ಶೌಚಾಲಯ ವ್ಯವಸ್ಥೆ ಮಾಡಾಗಿದ್ದು, ಪ್ರಸ್ತುತ ಕಟ್ಟಡವು ಉಪಯೋಗಕ್ಕೆ ಯೋಗ್ಯವಾಗಿರುತ್ತದೆ. ದಿ: 28.08.2025 ರಿಂದ **27.08.2035** ರವರೆಗೆ ಕಟ್ಟಡ ಸುರಕ್ಷತಾ ಪ್ರಮಾಣ ಪತ್ರವನ್ನು ಕೆಳಕಂಡ ಷರತ್ತುಗಳೊಂದಿಗೆ ನೀಡಲಾಗಿರುತ್ತದೆ.

**ಷರತ್ತುಗಳು :-**

ಶಾಲೆಯ ಆಡಳಿತ ಮಂಡಳಿಯವರಿಗೆ :

1. ಕರ್ನಾಟಕ ಸರ್ಕಾರದ ಸುತ್ತೋಲೆ ದಿನಾಂಕ 25.09.2024ರಲ್ಲಿ ವಿವರಿಸಿರುವ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.
2. ಕರ್ನಾಟಕ ಸರ್ಕಾರದ ಸುತ್ತೋಲೆ ದಿನಾಂಕ 07.05.2022ರಲ್ಲಿ ವಿವರಿಸಿರುವ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.
3. ಸದರಿ ಶಾಲಾ ಕಟ್ಟಡಕ್ಕೆ ಅವಶ್ಯವಿರುವ ಕುಡಿಯುವ ನೀರಿನ ವ್ಯವಸ್ಥೆಯನ್ನು ಮುಂದಿನ 10 ವರ್ಷಗಳ ವರೆಗೆ ಸುಸ್ಥಿತಿಯಲ್ಲಿಡುವುದು.
4. ಸದರಿ ಶಾಲಾ ಕಟ್ಟಡಕ್ಕೆ ಗಂಡು ಮಕ್ಕಳು. ಹೆಣ್ಣು ಮಕ್ಕಳಿಗೆ ಹಾಗು ಅಂಗವಿಕಲರಿಗೆ ಪ್ರತ್ಯೇಕವಾಗಿ ಶೌಚಾಲಯ ವ್ಯವಸ್ಥೆಯನ್ನು ಮಾಡತಕ್ಕದ್ದು ಹಾಗೂ ಕಡ್ಡಾಯವಾಗಿ ಶುಚಿತ್ವವನ್ನು ಕಾಪಾಡಿಕೊಳ್ಳತಕ್ಕದ್ದು.
5. ಸದರಿ ಶಾಲಾ ಕಟ್ಟಡದಲ್ಲಿ ಅಂಗವಿಕಲರಿಗೆ ರ್‍ಯಾಂಪ್ ವ್ಯವಸ್ಥೆಯನ್ನು ಮುಂದಿನ 10 ವರ್ಷಗಳ ವರೆಗೆ ಸುಸ್ಥಿತಿಯಲ್ಲಿಡುವುದು.
6. ಸದರಿ ಶಾಲಾ ಕಟ್ಟಡವನ್ನು ಕಾಲಕಾಲಕ್ಕೆ ತಪಾಸಣೆ ನಡೆಸಿ ಅವಶ್ಯವಿರುವ ನಿರ್ವಹಣೆಯನ್ನು ಮಾಡತಕ್ಕದ್ದು.
7. ಸದರಿ ಶಾಲಾ ಕಟ್ಟಡವನ್ನು ಮಾರ್ಪಾಡು ಮಾಡಬೇಕಾದ ಸಂದರ್ಭದಲ್ಲಿ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರದಿಂದ ಅನುಮತಿ ಮತ್ತು ಅನುಮೋದನೆಯನ್ನು ಕಡ್ಡಾಯವಾಗಿ ಪಡೆಯತಕ್ಕದ್ದು.

(Seal and Signature of the Authority)

Assistant Executive Engineer,
PWD No.1 Sub-Division,
Vinoba Road, Mysuru-570005